ನಮ್ಮ ಸಾಹಿತ್ಯವನ್ನು ನಾವೇ ಪ್ರಕಟಿಸಬೇಕಾಯಿತು. ಕೆಲವರು ತಮ್ಮ ಪತ್ನಿಯರ ಮಂಗಳಸೂತ್ರವನ್ನು ಮಾರಿದರು. ಮತ್ತೆ ಕೆಲವರು ಸಾಲಮಾಡಿ ತಮ್ಮ ಬರಹವನ್ನು ಪ್ರಕಟಿಸಿದರು. ನಮ್ಮನ್ನು ಸಾಹಿತ್ಯ ಸಮ್ಮೇಳನದಿಂದಲೂ ದೂರವಿರಿಸಿದರು. ನಿಮ್ಮದು ಥಾಲತೂ ಸಾಹಿತ್ಯವೆಂದರು. ನಾವು ಈಗ ತಾನೇ ಸಾಹಿತ್ಯ ಕ್ಷೇತ್ರಕ್ಕೆ ಪದಾರ್ಪಣೆಯನ್ನು ಮಾಡುತ್ತಲಿದ್ದೇವೆ ಎಂಬುದನ್ನೂ ಅವರು ಅರಿಯದೇ ಹೋದರು. ಸುಮಾರು ಎರಡು ದಶಕಗಳ ಕಾಲ ನಮ್ಮ ಸಾಹಿತ್ಯ ಅಸ್ಪೃಶ್ಯವಾಗೇ ಬದುಕಬೇಕಾಯಿತು. ಈಗ ನಮಗೆ ಒಂದಿಷ್ಟು ಬೆಲೆ ಬಂದಿದೆ. ನಮ್ಮನ್ನು ಲೇಖಕರೆಂದು ಪರಿಗಣಿಸ ತೊಡಗಿದ್ದಾರೆ. ಪಠ್ಯಪುಸ್ತಕದಲ್ಲೂ ಸ್ಥಾನ ಸಿಗುತ್ತಲಿದೆ. ನಾವು ಬರೆಯದೇ ಹೋಗಿದ್ದರೆ ನಮ್ಮ ಪರಿಸ್ಥಿತಿಯಲ್ಲಿ ಅಂಥ ಯಾವ ಮಹತ್ತರ ಬದಲಾವಣೆಯಾಗುತ್ತಿರಲಿಲ್ಲ. ನಮ್ಮ ಬರಹಗಳಿಂದ ನಮ್ಮ ಸಂಕಟ ಅವರಿಗೆ ಅರ್ಥವಾಯಿತು. ದಲಿತ ಸಾಹಿತ್ಯದಿಂದಾಗಿ ಸಾಹಿತ್ಯದ ಭಾಷೆ ಬದಲಾಯಿತು, ವಿಷಯ ಬದಲಾಯಿತು. ಅಷ್ಟೇ ಅಲ್ಲ, ಸಾಹಿತ್ಯವೂ ಬದಲಾಯಿತು.

- **ನೀವು 70–80ರ ದಶಕದಲ್ಲಿ ಬರೆಯುತ್ತಿರುವ ದಲಿತ ಸಾಹಿತ್ಯಕ್ಕೂ, ಈಗಿನ ದಲಿತ ಸಾಹಿತ್ಯದ ರಚನೆಗೂ ನೀವೇನಾದರೂ ವ್ಯತ್ಯಾಸ ಕಾಣುತ್ತೀರಾ?**

ಹೌದು, ಆಗಿನ ಈಗಿನ ದಲಿತ ಸಾಹಿತ್ಯ ರಚನೆಯಲ್ಲಿ ಸಾಕಷ್ಟು ವ್ಯತ್ಯಾಸವಿದೆ. ಈಗ ಅದು ಸಾಕಷ್ಟು ವಿಕಸಿತಗೊಂಡಿದೆ. ಈಗಿನವರ ವ್ಹಿಜನ್ ಸಾಕಷ್ಟು ವಿಶಾಲವಾಗಿದೆ. ನಮ್ಮ ಕಾಲವು ದಲಿತ ಸಾಹಿತ್ಯದ ಶುರುವಾತಿನ ಕಾಲವಾಗಿತ್ತು. ನಾವು ನಮ್ಮ ಪ್ರಶ್ನೆ, ನಮ್ಮ ವ್ಯಥೆಯನ್ನು ಜಗತ್ತಿನ ಎದುರಿಗೆ ಮಂಡಿಸುವುದಾಗಿತ್ತು. ಜಗತ್ತು ನಮ್ಮ ವ್ಯಥೆಯನ್ನು ಅರಿಯಲಿ ಎನ್ನುವುದೇ ನಮ್ಮ ಉದ್ದೇಶವಾಗಿತ್ತು. ನಮ್ಮ ಸಂಕಟವನ್ನು ಬರಹಗಳ ಮೂಲಕ ವ್ಯಕ್ತ ಮಾಡುವುದಾಗಿತ್ತು. ಸುಮಾರು ಎರಡು ದಶಕಗಳ ಕಾಲ ಜಗತ್ತು ನಮ್ಮ ವ್ಯಥೆಯನ್ನು ಅರ್ಥಮಾಡಿಕೊಂಡು ವ್ಯವಸ್ಥೆಯಲ್ಲಿ ಏನಾದರೂ ಸುಧಾರಣೆಯಾಗಲಿ ಎನ್ನುವುದೇ ಆಗಿತ್ತು. ಇದು ಮೊದಲನೇ ಹಂತ. ಎರಡನೇ ಹಂತದಲ್ಲಿ ನಾವು ಮಾನವ ಹಕ್ಕಿನ ಕುರಿತು ಮಾತಾಡಿದೆವು. ಅದಕ್ಕಾಗಿ ನಮ್ಮ ಬರಹ, ಚಳವಳಿಗಳ ಮೂಲಕ ಹೋರಾಡಿದೆವು. ನಮಗೂ ನಾಗರಿಕ ಹಕ್ಕು ಕೊಡಿ ಎಂದೆವು. ದಲಿತ ಲೇಖಕನೂ ತನ್ನ ಬರಹಗಳ ಮೂಲಕ ದೇಶವನ್ನು 'ಮಹಾನ್'ಗೊಳಿಸುತ್ತಾನೆ. ನಮ್ಮ ದೇಶದ ಮುಖದ ಮೇಲೆ ಇಂದಿಗೂ



"ಗಾಂಧಿ–ಮಾರ್ಕ್ಸ್–ಅಂಬೇಡ್ಕರರು ಕೇವಲ ಮಹಾಪುರುಷರು ಮಾತ್ರರಾಗಿರಲಿಲ್ಲ, ಜಗತ್ತೇ ಸ್ವೀಕರಿಸಿದ, ಉನ್ನತಿಯತ್ತ ಸಾಗುವ ವಿಚಾರ ಧಾರೆಗಳಾಗಿದ್ದಾರೆ. ತತ್ತ್ವಜ್ಞಾನವಾಗಿ ಅವರೆಂದೂ ನಾಶವಾಗುವುದಿಲ್ಲ.